ಪಟ್ಟಿನತ್ತಾರ್-2

ಕಥೆ: ವಂದು ಮಾಮ

ಚಿತ್ರ : ಪದ್ಮವಾಸನ್

1 ಕಾವೇರಿ ಪೂಂಪಟ್ಟಣದಲ್ಲಿ ತಿರುವೇಂಗಡರ್ ಅತ್ಯಂತ ಶ್ರೀಮಂತ ವ್ಯಕ್ತಿ. ಅವನು ಸಂನ್ಯಾಸಿಯಾದಾಗ, ಮನೆಯಿಂದ ಹೊರಗಡೆ ದೂರ ಹೋಗಲಾರಂಭಿಸಿದ. ಇದನ್ನು ಕಂಡು ಅವನ ತಾಯಿ ದುಃಖಿಸತೊಡಗಿದಳು.





3 ಜನರು ಅವನನ್ನು 'ಪಟ್ಟಿನತ್ತಾರ್' ಎಂದು ಕರೆದರು. ಅವನ ಬಂಧುಗಳು ಅವನನ್ನು ದ್ವೇಷಿಸತೊಡಗಿದರು. ಸಂನ್ಯಾಸಿಯಾಗುವ ಮೂಲಕ ಅವನು ತಮ್ಮ ಘನತೆಗೆ ಧಕ್ಕೆ ತಂದಿರುವುದಾಗಿ ಅವರು ಭಾವಿಸಿದರು. ಅವರೆಲ್ಲ ಅವನಿಗೆ ಬಹಿಷ್ಕಾರ ಹಾಕಲು ನಿರ್ಧರಿಸಿದರು.



4 ಆ ರೊಟ್ಟಿಯಲ್ಲಿ ಅವರು ವಿಷ ತುಂಬಿಸಿದ್ದರು. ದಿವ್ಯದೃಷ್ಟಿಯಿಂದ ಪಟ್ಟಿನತ್ತಾರ್‌ಗೆ ಇದು ತಿಳಿಯಿತು. ಅವನು ಆ ರೊಟ್ಟಿಯನ್ನು ಆ ಮನೆಯ ಮೇಲಕ್ಕೆ ಎಸೆದ. ಆಗ ಆ ಮನೆಗೆ ಬೆಂಕಿ ಹತ್ತಿಕೊಂಡಿತು.



5

ಪಟ್ಟಿನತ್ತಾರ್ ಮಾಡಿದ ಕಠೋರ ತಪಸ್ಸನ್ನು ಕಂಡು ಜನರು ಅವನನ್ನು ಹೊಗಳಿದರು. ಅವನ ತಾಯಿಯ ಅಂತ್ಯಕಾಲ ಸಮೀಪಿಸಿತು. ಆಗ ಅವನು ಕಾವೇರಿ ಪೂಂಪಟ್ಟಣಕ್ಕೆ ಬಂದ. ಅವನ ಬಂಧುಗಳು ಯಾರೂ ಸಹಕರಿಸಲಿಲ್ಲ, ಆದ್ದರಿಂದ ಪಟ್ಟಿನತ್ತಾರ್ ಒಬ್ಬನೇ ಬಾಳೆದಿಂಡಿನ ಚಿತೆಯ ಮೇಲೆ ತಾಯಿಯ ದೇಹವನ್ನಿರಿಸಿ, ಮಂತ್ರವನ್ನು ಉಚ್ಚರಿಸಿದ. ಅದರಿಂದ ಅಗ್ನಿ ಪ್ರಜ್ವಲಿಸಿತು.



6

ಅವನು ದೇವಾಲಯದಿಂದ ದೇವಾಲಯಕ್ಕೆ ಹೋಗುತ್ತ ಸ್ತೋತ್ರಗಳನ್ನು ಹಾಡಿ, ದೇವರ ದರ್ಶನ ಪಡೆದ. ಮಾಕಾಲಂ ಎಂಬ ಕ್ಷೇತ್ರಕ್ಕೆ ಅವನು ಬಂದಾಗ ....



7

ಕಳ್ಳರು ಎಸೆದ ರತ್ನಹಾರವು ಪಟ್ಟಿನತ್ತಾರ್‌ನ ಕೊರಳಲ್ಲಿ ಬಿತ್ತು. ಕಳ್ಳರನ್ನು ಬೆನ್ನಟ್ಟಿ ಬಂದ ರಾಜಭಟರು ಪಟ್ಟಿನತ್ತಾರ್ ಕೊರಳಲ್ಲಿದ್ದ ರತ್ನಹಾರವನ್ನು ಕಂಡರು.

8



9 ರಾಜ ಭದ್ರಗಿರಿಯ ಆಜ್ಞೆಯಂತೆ ರಾಜಭಟರು ಪಟ್ಟಿನತ್ತಾರ್‌ನನ್ನು ಗಲ್ಲುಗಂಬದ ಬಳಿಗೆ ಎಳೆದು ತಂದರು. ಪಟ್ಟಿನತ್ತಾರ್ ಗಲ್ಲುಗಂಬದ ಮುಂದೆ ಬಂದು, ಅದನ್ನು ದಿಟ್ಟಿಸಿ ನೋಡಿದಾಗ ಅದಕ್ಕೆ ಬೆಂಕಿ ಹತ್ತಿಕೊಂಡಿತು. ನೋಡುತ್ತಿದ್ದಂತೆಯೇ ಉರಿದು ಬೂದಿಯಾದ ಗಲ್ಲುಗಂಬವನ್ನು ನೋಡಿ ಅಲ್ಲಿದ್ದ ಎಲ್ಲರೂ ಭಯ ಭೀತರಾದರು.



10 ನಡೆದ ಸಂಗತಿಯೇನೆಂದು ರಾಜನಿಗೆ ತಿಳಿಯಿತು. ಅವನು ಓಡೋಡಿ ವಧಾಸ್ಥಾನಕ್ಕೆ ಬಂದು ಪಟ್ಟಿನತ್ತಾರ್ ಕಾಲಿಗೆ ಬಿದ್ದ.



11 ರಾಜ ಭದ್ರಗಿರಿಗೆ ಕೂಡ ಸಂನ್ಯಾಸಿಯಾಗಿ, ಪಟ್ಟಿನತ್ತಾರ್ ಜೊತೆಗೆ ಹೋಗುವ ಆಸೆ ಉಂಟಾಯಿತು. ಆದರೆ ಪಟ್ಟಿನತ್ತಾರ್ ಅವನಿಗೆ ತಿರುವಿಡೈ ಮರುದೂರ್‌ಗೆ ಹೋಗಲು ಆದೇಶಿಸಿದ. ತಾನು ತೀರ್ಥಯಾತ್ರೆ ಹೊರಟ.



12 ರಾಜನು ಸಂನ್ಯಾಸಿಯಾಗಿ, ತಿರುವಿಡೈ ಮರುದೂರಿಗೆ ಹೋದ. ಅಲ್ಲಿ ಪಶ್ಚಿಮದ ಗೋಪುರದ ಬಳಿ ವಾಸಿಸ ತೊಡಗಿದ.



13 ಹಲವು ದೇವಾಲಯಗಳನ್ನು ಸಂದರ್ಶಿಸಿ, ಪಟ್ಟಿನತ್ತಾರ್ ತಿರುವಿಡೈ ಮರುದೂರ್‌ಗೆ ಬಂದ. ಒಂದು ದಿನ...



14 ಪಟ್ಟಿನತ್ತಾರ್ ಆ ಸಂನ್ಯಾಸಿಯನ್ನು ತನ್ನ ಬಳಿಗೆ ಕಳುಹಿಸಿದನೆಂದು ಅರಿತ ಭದ್ರಗಿರಿ...



15 ಪಟ್ಟಿನತ್ತಾರ್ ಅನೇಕ ದೇವಾಲಯಗಳ ದರ್ಶನ ಹೊಂದಿ, ಅಲ್ಲೆಲ್ಲ ಸ್ತೋತ್ರಗಳನ್ನು ಹಾಡಿ ಪೂಜಿಸಿದ. ಬಳಿಕ ಅವನು ತಿರುವೊಟ್ರಿಯೂರ್‌ಗೆ ಬಂದ. ಒಂದು ದಿನ...



16 ಹಾಗೆ ಗುಂಡಿ ಮಾಡಿ, ತನ್ನನ್ನು ತಾನು ಹೂತುಕೊಂಡ ಜಾಗದಲ್ಲಿ ಪಟ್ಟಿನತ್ತಾರ್ ಸಮಾಧಿ ಇದೆ. ಅಲ್ಲೊಂದು ಶಿವಲಿಂಗ ಉದ್ಭವವಾಯಿತಂತೆ. ಪಟ್ಟಿನತ್ತಾರ್‌ನ ಮಹಿಮೆಯನ್ನರಿತ ಜನರು ಅವನನ್ನು ಹೂಗಳಿಂದ ಪೂಜಿಸತೊಡಗಿದರು. ಪಟ್ಟಿನತ್ತಾರ್ ಬರೆದ ಸ್ತುತಿಗಳು ಇಂದಿಗೂ ಸ್ಫೂರ್ತಿದಾಯಕವಾದ ಕೃತಿಗಳಾಗಿವೆ.